# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ದಿನಾಚರಣೆಯನ್ನು ಆಚರಿಸುವ ಸಂಬಂಧ ರಚಿಸಲಾಗಿರುವ ಹಣಕಾಸು ನಿರ್ವಹಣಾ ಸಮಿತಿಯು ದಿನಾಂಕ 09-03-2012 ರಂದು ಮದ್ಯಾಹ್ನ 3:00 ಗಂಟೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಕೊಠಡಿ ಸಂಖ್ಯೆ : 202ರಲ್ಲಿ ಸಭೆ ಸೇರಿ ಸಮಿತಿಯು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ನಡೆದ ಪ್ರಥಮ ಪೂರ್ವಭಾವಿ ಸಭೆಯ ನಡವಳಿಗಳು:-

| ಕ್ರಮ ಸಂಖ್ಯೆ | ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ | ಪದನಾಮ |
|---|---|---|
| 01 | ಜಿ. ಮಂಜುನಾಥರಾಜು, ಅಧ್ಯಕ್ಷರು, ತೆ.&ಆ.ಸ್ಥಾ.ಸ | ಅಧ್ಯಕ್ಷರು |
| 02 | ಎ.ಎಲ್. ಶಿವಕುಮಾರ್, ಅಧ್ಯಕ್ಷರು, ಲೆ.ಪ.ಸ್ಥಾ.ಸ | ಅಧ್ಯಕ್ಷರು |
| 03 | ಗಾಯಿತ್ರಿ ಜವರಾಯಿಗೌಡ, ಪಾಲಿಕೆ ಸದಸ್ಯರು, ವಾರ್ಡ್-40 | ಸದಸ್ಯರು |
| 04 | ನೂರ್ ಜಹಾನ್, ಪಾಲಿಕೆ ಸದಸ್ಯರು, ವಾರ್ಡ್-31 | ಸದಸ್ಯರು |
| 05 | ಡಾ|| ನಂದನ್‌ಕುಮಾರ್.ಜೆ.ವಿ, ಜಂಟಿ ನಿಯಂತ್ರಕರು (ಹಣಕಾಸು) | ಸಂಚಾಲಕರು |
| | ಗೈರು ಹಾಜರಿದ್ದ ಸದಸ್ಯರು ಶ್ರೀಯುತರು | |
| 02 | ಡಿ.ವೆಂಕಟೇಶ ಮೂರ್ತಿ, ಪಾಲಿಕೆ ಸದಸ್ಯರು, ವಾರ್ಡ್-163 | ಸದಸ್ಯರು |

ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದವರನ್ನು ಸ್ವಾಗತಿಸುತ್ತಾ, ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ದಿನಾಚರಣೆಯನ್ನು ಆಚರಿಸುವ ಸಂಬಂಧ ರಚಿಸಲಾಗಿರುವ ಹಣಕಾಸು ನಿರ್ವಹಣಾ ಸಮಿತಿಯ ಕಾರ್ಯ ವೈಖರಿ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

ಕೆಂಪೇಗೌಡ ದಿನಾಚರಣೆಯ ಅಂಗವಾಗಿ ರಚಿಸಲಾಗಿರುವ ಈ ಕೆಳಕಂಡ ಸಮಿತಿಗಳಿಗೆ ಅದರ ಮುಂದೆ ನಮೂದಿಸಿರುವಂತೆ ಹಣವನ್ನು ನಿಗಧಿಪಡಿಸಲಾಗಿದ್ದು, ನಿಗಧಿಪಡಿಸಲಾಗಿರುವ ಮೊತ್ತಕ್ಕೆ ಸಿಮೀತಗೊಳಿಸಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಹಾಗೂ ಆಯಾ ಕಾರ್ಯಕ್ರಮಕ್ಕೆ ಬೇಕಾಗಿರುವ

ಹಣದ ಮೊತ್ತದೊಂದಿಗೆ ವರದಿ ಸಿದ್ಧಪಡಿಸಿ ಹಣಕಾಸು ನಿರ್ವಹಣಾ ಸಮಿತಿಗೆ ಕಳುಹಿಸುವಂತೆ ಎಲ್ಲಾ ಸಮಿತಿಯ ಅಧ್ಯಕ್ಷರುಗಳನ್ನು ಕೋರಲು ಹಾಗೂ ಮಾಡುವ ವೆಚ್ಚದ ಬಗ್ಗೆ ಬಿಲ್ಲು/ವೋಚರಗಳೊಂದಿಗೆ ದಾಖಲೆಗಳನ್ನು ಇಟ್ಟುಕೊಳ್ಳುವಂತೆ ಸಮಿತಿಯ ಸಂಚಾಲಕರಿಗೆ ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ವಿವರ | ಸಂಚಾಲಕರು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01 | ಸ್ವಾಗತ ಮತ್ತು ಸನ್ಮಾನ ಸಮಿತಿ | ಸಾರ್ವಜನಿಕ ಸಂಪರ್ಕಾಧಿಕಾರಿ | 35.00 |
| 02 | ಉತ್ತಮ ನೌಕರರ ಸನ್ಮಾನ ಸಮಿತಿ | ಉಪ ಆಯುಕ್ತರು (ಆಡಳಿತ) | 10.00 |
| 03 | ಸಾಂಸ್ಕೃತಿಕ ಸಮಿತಿ | ಮುಖ್ಯ ಅಭಿಯಂತರರು (ಮಾರುಕಟ್ಟೆ) | 25.00 |
| 04 | ಪ್ರಚಾರ ಸಮಿತಿ | ಜಂಟಿ ಆಯುಕ್ತರು (ಜಾಹೀರಾತು) | 10.00 |
| 05 | ವೇದಿಕೆ ಮತ್ತು ಅಲಂಕಾರ ಸಮಿತಿ | ತೋಟಗಾರಿಕೆ ಅಧೀಕ್ಷಕರು (ಪೂರ್ವ) | 25.00 |
| 06 | ಕ್ರೀಡಾ ಸಮಿತಿ | ಸಹಾಯಕ ವಿದ್ಯಾಧಿಕಾರಿ | 50.00 |
| 07 | ಮಹಿಳೆಯರ ಕ್ರೀಡಾ ಸಮಿತಿ | ಮುಖ್ಯ ಆರೋಗ್ಯಾಧಿಕಾರಿ | 10.00 |
| 08 | ದೀಪಾಲಂಕಾರ ಸಮಿತಿ | ಮುಖ್ಯ ಅಬಿಯಂತರರು (ಪೂರ್ವ) | 15.00 |
| 09 | ಚಿತ್ರಕಲಾ ಮತ್ತು ರಂಗೋಲಿ ಸಮಿತಿ | ಸಹಾಯಕ ಆಯುಕ್ತರು (ಭೂಸ್ವಾಧೀನ) | 05.00 |
| 10 | ಕೆಂಪೇಗೌಡ ಪ್ರಶಸ್ತಿ & ಬಹುಮಾನ ವಿತರಣಾ ಸಮಿತಿ | ಸಾರ್ವಜನಿಕ ಸಂಪರ್ಕಾಧಿಕಾರಿ | 35.00 |
| 11 | ಉಟೋಪಚಾರ ಸಮಿತಿ | ಆರೋಗ್ಯಾಧಿಕಾರಿ (ಪೂರ್ವ) | 15.00 |
| 12 | ನಾಲ್ಕು ಗಡಿ ಗೋಪುರಗಳಿಂದ ವಿವಿಧ ಜಾನಪದ ಕಲಾ ತಂಡಗಳಿಂದ ಜ್ಯೋತಿಗಳನ್ನು ತರಲು ಪ್ರತಿ ಗೋಪುರಕ್ಕೆ ರೂ.5.00 ಲಕ್ಷಗಳಂತೆ | ಜಂಟಿ ಆಯುಕ್ತರು (ದಕ್ಷಿಣ), (ಪೂರ್ವ), (ಪಶ್ಚಿಮ) | 20.00 |

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು,**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ**
**ಕೆಂಪೇಗೌಡ ದಿನಾಚರಣೆ ಹಣಕಾಸು ನಿರ್ವಹಣಾ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು,**

01. ಪೂಜ್ಯ ಮಹಾಪೌರರು, ರವರ ಅವಗಾಹನೆಗೆ ಕಳುಹಿಸಿದೆ.
02. ಉಪ ಮಹಾಪೌರರು, ರವರ ಅವಗಾಹನೆಗೆ ಕಳುಹಿಸಿದೆ.
03. ಆಯುಕ್ತರು, ರವರ ಅವಗಾಹನೆಗೆ ಕಳುಹಿಸಿದೆ.
04. ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.